ಕವಿತೆ


# ಎಂಬತ್ತರ ಕವಿಯ ದಾಂಪತ್ಯಗೀತೆಗಳು



ಡಾ. ನಾ. ಮೊಗಸಾಲೆ

ಕಲೆ: ಬಸವರಾಜ ಎಸ್. ಕಲೆಗಾರ

## ಬತ್ತದ ಒಸರು



ನನ್ನ ಎದೆಯ ಚಾವಡಿಯಲ್ಲಿ
ಹಗಲು ರಾತ್ರೆ ಸೂರ್ಯನ ಬೆಳಕು
ಕಿಟಕಿಯಲ್ಲಿ ಇಣುಕಬೇಡ, ದಮ್ಮಯ್ಯ
ನೇರವಾಗಿ ಅಂಗಳದಲ್ಲೇ ನಡೆದು ಬಾ!

ನಾನು ಕೊಟ್ಟ ಸ್ವಾತಂತ್ರ್ಯದ ಹೂಗಿಡಕ್ಕೆ
ನೀನು ಕಸಿಕಟ್ಟಿ ಆಗಿದೆ ಗುಲಾಬಿ
ಈಗ ಇರುವ ಪ್ಲಾಸ್ಟಿಕ್ ಗಿಡಗಳನ್ನು
ಕಿತ್ತುಹಾಕಿ ಚಾವಡಿಯ ಸಿಂಗರಿಸು

ಕಿತ್ತುಕೊಳಲಿಲ್ಲ ನನ್ನ ಮುತ್ತನ್ನು ನೀನು
ನಾನಾಗಿಯೇ ಮುದ್ದಿಸುವ ತನಕ
ಆ ಮೇಲೆ ನಾನು ಕೊಟ್ಟ ಮುತ್ತು
ಮಗುವಾಗಿದೆ ನಿನ್ನ ಕೈಯಲ್ಲಿ

ಸುಮ್ಮನೇ ಎನ್ನುವ ಶಬ್ದ ಇಲ್ಲ ನಮ್ಮಲ್ಲಿ
ಜಗಳಕ್ಕೆ ಪ್ರೀತಿಗೆ ಮತ್ತು ಮಾತಿಗೆ
ಇಬ್ಬರ ಒಳಗಿದೆ ದೊಡ್ಡದೊಂದು ಖಜಾನೆ
ಅದಕ್ಕೆ 'ಕೀ' ಬೇಡ ಇಬ್ಬರಿಗೂ

ಬಾವಿ ಮತ್ತು ನೀರಿನ ಸಂಬಂಧ ನಮ್ಮದು
ಇಬ್ಬರು ಮೊಗೆ ಮೊಗೆದರೂ ಅದೇ ಸಿಹಿ ನೀರು
ಮಳೆ ಬಂದರೂ ಬಾರದಿದ್ದರೂ
ನೆರೆಯ ನೀರಲ್ಲ ಅದು, ಬತ್ತದ ಒಸರು!